ಜ) ಇವರಿಗೆ ರಾಜ್ಯದ ಬೊಕ್ಕಸದಿಂದ ಯಾವುದೇ ಸಂಭಾವನೆ ಹಣವನ್ನು ನೀಡಲಾಗಿಲ್ಲ.

ಟ) ಇವರಿಗೆ ಇಲಾಖೆಯಲ್ಲಿ ನೇಮಕ ಮಾಡಿಕೊಂಡಿರುವುದಕ್ಕೆ ಯಾವುದೇ ನೇಮಕಾತಿ ಆದೇಶ ನೀಡಿಲ್ಲ ಹಾಗೂ ಇವರಿಗೆ ರಾಜ್ಯದ ಬೊಕ್ಕಸದಿಂದ ಯಾವುದೇ ರೀತಿಯ ಸಂಭಾವನೆಯನ್ನು ನೀಡದೆ ಇರುವುದರಿಂದ ಇವರನ್ನು ಸ್ಥಳೀಯ ಅಭ್ಯರ್ಥಿಗಳಾಗಿ ಅಥವಾ ದಿನಗೂಲಿ ನೌಕರರಾಗಿ ಪರಿಗಣಿಸಲು ಬರುವುದಿಲ್ಲ.

ಮೇಲ್ಕಂಡ ನಕಲು ತಯಾರಕರು ಕಳೆದ ೨ ವರ್ಷಗಳಿಂದ ಮನವಿ ಸಲ್ಲಿಸುತ್ತಾ, ಅವರನ್ನು ಖಾಯಂಗೊಳಿಸಬೇಕೆಂದು, ಅವರಿಗೆ ಕೊನೆಯ ಪಕ್ಷ ಮಾಹೆಯಾನ ರೂ ೧೫೦೦ ವೇತನ ಸಿಗುವಂತೆ ಮಾಡಬೇಕೆಂದು ಕೋರುತ್ತಿದ್ದಾರೆ. ಇವರ ಕೋರಿಕೆಯ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದ್ದಾಗ್ಯೂ ನಿಯಮಗಳ ಪ್ರಕಾರ ಇವರ ಕೋರಿಕೆಗಳನ್ನು ಪರಿಗಣಿಸಲು ಅವಕಾಶ ಇರುವುದಿಲ್ಲ. ಇವರಿಗೆ ನೀಡಂತ್ತಿರುವ ನಕಲು ತಾರಿಸುವ ಶುಲ್ಕವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸುವ ಪ್ರಯತ್ನ ಮಾಡ ಬಹುದಾಗಿದೆ. ಈ ವ್ಯಕ್ತಿಗಳು ಧರಣಿ ನಡೆಸುತ್ತಿರುವುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ಇವರಿಗೆ ಈಗಾಗಲೇ ಸಮಂಜಸವಾದ ಉತ್ತರ ನೀಡಲಾಗಿದೆ.

೪ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ತುಂಬೆ ಅಣೆಕಟ್ಟಿನ ಕೆಲಸವನ್ನು ಸಂಪೂರ್ಣಗೊಳಿಸಲು ಆಗ್ರಹ

೨–೫೦ ಪಿ.ಎಂ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) — ಸನ್ಮಾನ್ಯ ಉಪಾಧ್ಯಕ್ಷೆಯವರೆ, ಮಂಗಳೂರು ಮಹಾ ನಗರಪಾಲಿಕೆಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಜನಪರಿಯಿಂದ ಮೇ ಅಖೈರು ವರೆಗೆ ಭಾರೀ ಕುಡಿಯುವ ನೀರಿನ ಕೊರತೆ ಇದೆ. ಈ ವರ್ಷ ನೀರಿನ ಬರಗಾಲ ಮಂಗಳೂರು ನಗರವನ್ನೇ ತಲ್ಲಣಗೊಳಿಸಿರುತ್ತದೆ. ಈ ನೀರಿನ ಕೊರತೆ ನೀಗಿಸಲು ತುಂಬೆಯಲ್ಲಿ ಅಣೆಕಟ್ಟು ಕಟ್ಟಿ ಮಂಗಳೂರಿಗೆ ಕುಡಿಯುವ ನೀರಿನ ಪೂರೈಕೆ ಮಾಡಲು ಕ್ರಮ ತೆಗೆದುಕೊಂಡು ಅಣೆಕಟ್ಟಿನ ಕೆಲಸ ಸ್ವಲ್ಪ ಪ್ರಾರಂಭವಾಗಿದೆ. ಆ ಅಣೆಕಟ್ಟು ಇನ್ನೂ ಪೂರ್ಣಗೊಳ್ಳದೇ ಇರುವುದರಿಂದ ಈ ರೀತಿಯ ನೀರಿನ ಹಾಹಾಕಾರ ಮಂಗಳೂರು ನಗರದಲ್ಲಿ ಆಗುತ್ತಲಿದೆ.

ಆದಕಾರಣ ತುಂಬೆ ಅಣೆಕಟ್ಟಿನ ಕೆಲಸವನ್ನು ಈ ವರ್ಷ ಸಂಪೂರ್ಣಗೊಳಿಸಿ ಮಂಗಳೂರು ನಗರಕ್ಕೆ ಕುಡಿಯುವ ನೀರು ಸರಾಗವಾಗಿ ಸಿಕ್ಕುವಂತೆ ಮಾಡುವುದು ಅತಿ ಪ್ರಾಮುಖ್ಯವಾಗಿರುತ್ತದೆ. ಈ ಕಾರಿತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಟಿ. ಎಸ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, ಮಂಗಳೂರು ನಗರಕ್ಕೆ ಬೇಸಿಗೆಯಲ್ಲಿ ಒದಗಂಶ್ಚಿರುವ ನೀರಿನ ಅಭಾವವನ್ನು ನೀಗಿಸಲು, ಬೇಸಿಗೆ ಕಾಲಕ್ಕೆ ಬೇಕಾಗುವ ಕುಡಿಯುವ ನೀರನ್ನು ಶೇಖರಿಸುವ ಸಲುವಾಗಿ ನೇತ್ರಾವತಿ ನದಿಯ ಅಡ್ಡಲಾಗಿ ತುಂಬೆಯ ಬಳಿ ಅಣೆಕಟ್ಟನ್ನು ನಿರ್ಮಿಸುವ ಕೆಲಸವು ನಡೆಯುತ್ತಿದೆ. ೧೫೦–೦೦ ಲಕ್ಷಗಳ ಅಂದಾಜನ್ನು ಫಲಾನುಭವಿಗಳಾದ ನಗರ ಪಾಲಿಕೆ, ಎಂ.ಸಿ.ಎಫ್. ಮತ್ತು ಇತರರಿಂದ ಅವರ ಪಾಲಿನ ಹಣವನ್ನು ಠೇವಣಿ ಮಾಡುವ ಷರತ್ತಿನ ಮೇರೆಗೆ ಸರ್ಕಾರವು ಆಜ್ಞೆ ಸಂಖ್ಯೆ ಹೆಚ್‌ಯುಡಿ: ೧ ಯುಡಬ್ಲ್ಯೂಎಸ್: ೮೯ ದಿನಾಂಕ ೨೫–೨–೮೯ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಯಿತು. ಆದಾಗ್ಯೂ ಹೆಚ್ಚು ಅನುಕೂಲ ಪಡೆಯುವ ನಗರಪಾಲಿಕೆಯು ತನ್ನ ಪಾಲಿನ ೭೫ ಲಕ್ಷ ರೂಪಾಯಿಗಳ ಪೈಕಿ ಕೇವಲ ೧೯–೦೦ ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿದೆ ಈ ವರೆವಿಗೂ ಸುಮಾರು ಶೇಕಡಾ ೭೦ ಭಾಗದಷ್ಟು ಕಾಮಗಾರಿಗಳು ಮುಗಿದಿದ್ದು ಇನ್ನೂ ಮೂರು ತಿಂಗಳಲ್ಲಿ ಉಳಿದ ಕೆಲಸವನ್ನು ಮುಗಿಸಬಹುದಾಗಿತ್ತು. ಆದರೆ ಪ್ರಸ್ತುತ ಸಾಲಿನ ಮೇ ಮಾಹೆಯಲ್ಲಿ ಅನಿರೀಕ್ಷಿತವಾಗಿ ಮಳೆಯು ಬಂದ ಕಾರಣ ನೇತ್ರಾವತಿ ನದಿಯಲ್ಲಿ ಪ್ರವಾಹ ಬಂದಿದ್ದರಿಂದ ಕೆಲಸವನ್ನು ನಿಲ್ಲಿಸಬೇಕಾಗಿದೆ. ಹಾಗೂ ಡಿಸೆಂಬರ್ ಮಾಹೆಯ ಅಂತ್ಯದವರೆಗೂ ಕೆಲಸವನ್ನು ಮುಂದುವರಿಸಲು ಸಾಧ್ಯವಿಲ್ಲ ಈ ಕಾರಣಗಳಿಂದಾಗಿ ಈ ಅಣೆಕಟ್ಟನ್ನು ೧೯೯೧ರ ಏಪ್ರಿಲ್–ಮೇ ಒಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಆದಾಗ್ಯೂ ಮುಂದಿನ ಬೇಸಿಗೆಯ ನೀರಿನ ಅಭಾವನನ್ನು ನೀಗಿಸಲು ನೀರನ್ನು ಶೇಖರಿಸಲು ಪ್ರಸ್ತಾವನೆ ಮಾಡಲಾಗಿದೆ.